# ಪೋಷಕತ್ವ (foster care) ಕಾರ್ಯಕ್ರಮದಡಿ ಮಗುವನ್ನು ಇರಿಸುವಾಗ ಅನುಸರಿಸಬೇಕಾದ ನಿಯಮಗಳು

## 1. ಪೋಷಕತ್ವ ಎಂದರೇನು?

**"ಪೋಷಕತ್ವ"** (**foster care**) ಎಂದರೆ, ಮಕ್ಕಳ ಕಲ್ಯಾಣ ಸಮಿತಿಯು ಮಗುವಿನ ರಕ್ಷಣೆಯನ್ನು ಜೈವಿಕ ಕುಟುಂಬವನ್ನು ಹೊರತು ಪಡಿಸಿ ಮತ್ತೊಂದು ಕೌಟುಂಬಿಕ ವಾತಾವರಣ ಹೊಂದಿರುವ ಪರ್ಯಾಯ ವ್ಯವಸ್ಥೆಯಲ್ಲಿ ಇರಿಸುವುದನ್ನು **ಪೋಷಕತ್ವ** ಎನ್ನಬಹುದು. ಈ ಪರ್ಯಾಯ ವ್ಯವಸ್ಥೆಯು ಮಕ್ಕಳ ಕಲ್ಯಾಣ ಸಮಿತಿಯಿಂದ ಆಯ್ಕೆ ಮಾಡಿದ, ಅರ್ಹತೆ ಹೊಂದಿರುವ, ಅಂಗೀಕಾರ ಪಡೆದಿರುವ ಹಾಗು ಮಕ್ಕಳ ರಕ್ಷಣೆಯನ್ನು ಮೇಲ್ವಿಚಾರಣೆಗೊಳಪಡುವ ವ್ಯವಸ್ಥೆ.

**ಪೋಷಕತ್ವ ಕುಟುಂಬ (foster family)** ಎಂದರೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಬಾಲನ್ಯಾಯ ಕಾಯ್ದೆ ಸೆಕ್ಷನ್ 44 ಅನ್ವಯ ಪೋಷಕತ್ವ ಯೋಜನೆಯಲ್ಲಿ ಮಕ್ಕಳನ್ನು ಇರಿಸಲು ಗುರುತಿಸಲ್ಪಟ್ಟ ಕುಟುಂಬ.

ಅರ್ಹ ವ್ಯವಸ್ಥೆ (**fit facility**) ಎಂದರೆ, ಸರ್ಕಾರದ ಸಂಸ್ಥೆ ಅಥವಾ ಸ್ವಯಂ ಸೇವಾ ಸಂಸ್ಥೆಯು ನಿರ್ದಿಷ್ಟ ಮಗುವನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಜವಾಬ್ದಾರಿಯನ್ನು ಹೊರಲು ಸಿದ್ಧವಾದ ವ್ಯವಸ್ಥೆ ಎಂದು ಅರ್ಥೈಸಬಹುದು. ಈ ವ್ಯವಸ್ಥೆಯನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಅರ್ಹತೆ ಹೊಂದಿದೆ ಎಂದು ಗುರುತಿಸುವ ಜವಾಬ್ದಾರಿ ಮಕ್ಕಳ ಕಲ್ಯಾಣ ಸಮಿತಿಯದು.

**ಗುಂಪು ಪೋಷಕತ್ವ (group foster care) ಎಂದರೆ,** ಅರ್ಹ ವ್ಯವಸ್ಥೆಯೊಳಗೆ ಕುಟುಂಬದಲ್ಲಿ ದೊರೆಯುವ ರಕ್ಷಣೆಯನ್ನು ನೀಡುವಂತಹ ವ್ಯವಸ್ಥೆ. ಪೋಷಕರ ಕಾಳಜಿಯಿಲ್ಲದಿರುವ, ಪಾಲನೆ ಹಾಗು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ವೈಯುಕ್ತಿಕ ರಕ್ಷಣೆ ನೀಡುವುದರೊಂದಿಗೆ ಅವರನ್ನು ಅಸ್ತಿತ್ವವನ್ನು ಗುರುತಿಸಲ್ಪಡುವ ವ್ಯವಸ್ಥೆ ಎಂದು ಹೇಳಬಹುದು.

## 2. ಪೋಷಕತ್ವ ಕಾರ್ಯಕ್ರಮವನ್ನು ಎಷ್ಟು ವಿಧಗಳಲ್ಲಿ ಅನುಷ್ಠಾನಗೊಳಿಸಬಹುದು?

### (ಅ) ಕುಟುಂಬಕ್ಕೆ ಪೋಷಕತ್ವ:

**ಬಾಲ ನ್ಯಾಯ ಕಾಯ್ದೆ–2015 ಸೆಕ್ಷನ್ 44 ರಲ್ಲಿ** ಮಕ್ಕಳನ್ನು **ಪೋಷಕತ್ವ** ಯೋಜನೆಯಡಿಯಲ್ಲಿ ಪಾಲನೆ ಮತ್ತು ಪೋಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ **ಮಗುವಿಗೆ ಸಂಬಂಧವಿಲ್ಲದ ಕುಟುಂಬಕ್ಕೆ ತಾತ್ಕಾಲಿಕವಾಗಿ ಅಥವಾ ವಿಸ್ತರಿಸಲ್ಪಟ್ಟ ಅವಧಿಗೆ ಒಂದು ವರ್ಷಕ್ಕೆ ಮೀರದ ಅವಧಿಯವರಿಗೆ ಮಗುವನ್ನು ಪೋಷಕತ್ವ ಯೋಜನೆ ಅಡಿಯಲ್ಲಿ ನಿಯೋಜನೆ ಮಾಡಬಹುದು.** ಮಗುವಿನ ಹೊಂದಾಣಿಕೆಯ ಮೌಲ್ಯಮಾಪನದ ಅಧಾರದ ಮೇರೆಗೆ, ಆರೈಕೆ ಮಾಡುತ್ತಿರುವ ಪೋಷಕರಿಗೆ ಮಕ್ಕಳ ಕಲ್ಯಾಣ ಸಮಿತಿಯ 18 ವರ್ಷದ ವಯಸ್ಸಿನವರಿಗೂ ಪೋಷಕತ್ವವನ್ನು ಮುಂದುವರಿಸಬಹುದು.

## (ಬ) ಗುಂಪು ಪೋಷಕತ್ವ:

**ಗುಂಪು ಪೋಷಕತ್ವ** ಎಂದರೆ, ಜೈವಿಕ ಪೋಷಕರ ಪಾಲನೆ ಇಲ್ಲದಿರುವ ಮಕ್ಕಳನ್ನು ಬಾಲನ್ಯಾಯ ಕಾಯ್ದೆಯಡಿ ಗುರುತಿಸಲ್ಪಟ್ಟ ಅರ್ಹ ವ್ಯವಸ್ಥೆ (fit facility) ಯಲ್ಲಿ ಇರಿಸಬಹುದಾಗಿದೆ. ಇದರ ಮುಖ್ಯ ಉದ್ದೇಶವೆಂದರೆ, ಮಗುವು ತನ್ನ ಅಸ್ತಿತ್ವವನ್ನು (identity) ಗುರುತಿಸುವುದರೊಂದಿಗೆ, ಭಾವನಾತ್ಮಕ ಭದ್ರತೆ, ಮತ್ತು ವೈಯಕ್ತಿಕ ಅರೈಕೆಯನ್ನು ಪಡೆಯುವುದಾಗಿದೆ.

**ಬೀದಿ ಬದಿಗಳಲ್ಲಿ ಇರುವಂತಹ ಮಕ್ಕಳಿಗೆ** (street children) ಸೂಕ್ತವಾದ ವ್ಯವಸ್ಥಿತ ವ್ಯವಸ್ಥೆ ಕಲ್ಪಿಸಲು, ಕುಟುಂಬಕ್ಕೆ ಪೋಷಕತ್ವಕ್ಕೆ ನೀಡುವುದಕ್ಕೆ ಮುಂಚೆ, ಗುಂಪು ಪೋಷಕತ್ವ ಯೋಜನೆ ಅಡಿಯಲ್ಲಿ ನೀಡಬಹುದಾಗಿದೆ ಈ ರೀತಿ ನಿಯೋಜನೆ ಮಾಡುವುದರಿಂದ ಮಕ್ಕಳ ಪರಿವರ್ತನೆ ಮಾಡಲು ಸಹಾಯವಾಗುತ್ತದೆ. ಇದರಿಂದ ಮಗುವಿಗೆ ರಸ್ತೆ ಬದಿಯಲ್ಲಿ ಜೀವನ ನಿರ್ವಹಣೆ ಮಾಡಿಕೊಳ್ಳುವುದನ್ನು ತಪ್ಪಿಸಿ ಮಗುವಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ನೆರವಾಗುವುದು.

## 3. ಪೋಷಕತ್ವ ಯೋಜನೆಯ ಮೂಲಭೂತ ತತ್ವ:-

- ಕುಟುಂಬದ ವಾತಾವರಣದಲ್ಲಿ ಬೆಳೆಯಲು ಪ್ರತಿಯೊಂದು ಮಗುವಿಗೂ ಹಕ್ಕಿದೆ.
- ಮಗುವನ್ನು ಜೈವಿಕ ಕುಟುಂಬಕ್ಕೆ ಸೇರಿಸುವ ಪ್ರತಿಯೊಂದು ಪ್ರಯತ್ನವನ್ನು ಮಾಡಬೇಕು. ಯೋಜಿತ ಪ್ರಕ್ರಿಯೆಯ ಮೂಲಕ ಜೈವಿಕ ಕುಟುಂಬವನ್ನು ಬಲವರ್ಧಿಸಲು ಪೋಷಕತ್ವ ಯೋಜನೆಯಡಿ ಸಾಧ್ಯವಾಗುತ್ತದೆ.
- ಮಕ್ಕಳ ಹಿತದೃಷ್ಟಿಯಿಂದ ತೆಗೆದುಕೊಳ್ಳುವ ತೀರ್ಮಾನಗಳು ಮಗುವಿನ ಹಕ್ಕನ್ನು ಗೌರವಿಸುವುದರೊಂದಿಗೆ ಮಗುವಿನ ಸಾಮರ್ಥ್ಯದ ವೃದ್ಧಿಗೆ ಅನುಕೂಲವಾಗುವಂತಿರಬೇಕು.
- ಪೋಷಕತ್ವ ಯೋಜನೆಯಡಿ ನೀಡುವ ಮುನ್ನ ಮಗುವಿನ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಸಹೋದರರು ಅಥವಾ ಅವಳಿ ಜವಳಿ ಮಕ್ಕಳನ್ನು ಬೇರ್ಪಡಿಸದೇ, ಒಂದೇ ಕುಟುಂಬ ಅಥವಾ ಅರ್ಹ ವ್ಯವಸ್ಥೆಗೆ ನೀಡಬೇಕು. ಇಂತಹ ಸಂದರ್ಭಗಳಲ್ಲಿ ಮಕ್ಕಳ ಸಂಖ್ಯೆ ಮಿತಿ ದಾಟಿದಾಗ, ನಿಯಮವನ್ನು ಸಡಿಲಿಸಿ ನೀಡಬಹುದಾಗಿದೆ.

## 4. ಕುಟುಂಬ ಅಥವಾ ಗುಂಪು ಪೋಷಕತ್ವದಡಿಯಲ್ಲಿ ಮಕ್ಕಳನ್ನು ಇರಿಸುವಾಗ ಗಮನಿಸಬೇಕಾದ ಅಂಶಗಳು:

(ಎ) ಮಗುವನ್ನು ಸೂಕ್ತ ಕುಟುಂಬ ಅಥವಾ ಗುಂಪು ಪೋಷಕತ್ವಕ್ಕೆ ನೀಡುವ ನಿರ್ಧಾರವನ್ನು ಮಕ್ಕಳ ಕಲ್ಯಾಣ ಸಮಿತಿಯವರು ನಿರ್ಧರಿಸಬೇಕು. ಇಂತಹ ನಿರ್ಧಾರಗಳನ್ನು ಕೈಗೊಳ್ಳುವಾಗ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

- ಆಘಾತ ಅನುಭವಸಿದ ಮಗು
- ಮಾದಕ ದ್ರವ್ಯದ ಇತಿಹಾಸವುಳ್ಳ ಮಗು
- ಅಂಗವೈಕಲ್ಯತೆವುಳ್ಳ ಮಗು
- ಸಾಮಾಜಿಕ ನಡವಳಿಕೆ

* ಯಾವುದೇ ವಿಶೇಷ ಆರೈಕೆಯ ಅಗತ್ಯತೆಯುಳ್ಳ ಅಥವಾ ಮಾರಕವಾದ ಅನಾರೋಗ್ಯಕ್ಕೆ ತುತ್ತಾದ ಮಗು
* ಅಸಾಂಸ್ಥಿಕರಣಗೊಳಿಸಬೇಕಾದ ಮಗು

(ಬಿ) ಪ್ರಕರಣಗಳನ್ನು ಆಧರಿಸಿ ಮಗುವಿನ ಆಯ್ಕೆ (ಇಷ್ಟ) ಹಾಗು ಒಪ್ಪಿಗೆಗೆ ಅಥವಾ ಪೋಷಕರು/ ರಕ್ಷಕರು (guardians) ಆಯ್ಕೆಗೆ ಆದ್ಯತೆ ನೀಡಬೇಕು.

(ಸಿ) ಲಭ್ಯವಿರುವ ಆಯ್ಕೆ

(ಡಿ) ಸೂಕ್ತವಾದ ಆಯ್ಕೆ

**5. ಪೋಷಕತ್ವ ಯೋಜನೆಗೆ ಅರ್ಹತೆ ಹೊಂದಿರುವ ಮಕ್ಕಳು:**

**ಮಕ್ಕಳ ಕಲ್ಯಾಣ ಸಮಿತಿಯವತಿಯಿಂದ ದತ್ತು ನೀಡಬಹುದೆಂದು ನಿರ್ಧರಿಸಿದ 0–6 ವರ್ಷದ ಮಕ್ಕಳನ್ನು ಹಾಗು ದತ್ತು ಮುಕ್ತ ಆದೇಶ ಪಡೆದ 6 ವರ್ಷದ ಮೇಲ್ಪಟ್ಟ ಮಕ್ಕಳನ್ನು ಸಾಧ್ಯವಾದಷ್ಟು ಪೋಷಕತ್ವ ಯೋಜನೆಯಡಿಯಲ್ಲಿ ನೀಡಬಾರದು.** ಇಂತಹ ಮಕ್ಕಳನ್ನು ದತ್ತು ಅಧಿಸೂಚನೆ 2017ರ ಅನ್ವಯ ದತ್ತು ನೀಡುವ ಮುಖಾಂತರ ಶಾಶ್ವತ ನೆಲೆಯನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು.

**ಎ) ಮಕ್ಕಳ ಕಲ್ಯಾಣ ಸಮಿತಿಯವತಿಯಿಂದ ದತ್ತು ಮುಕ್ತ ಆದೇಶ ಪಡೆದು, ದತ್ತು ಹೋಗಲು ಸಾಧ್ಯವಾಗದಿರುವ ಈ ಕೆಳಕಂಡ ಮಕ್ಕಳನ್ನು ಪೋಷಕತ್ವದಡಿ ನೀಡಬಹುದು**

* ಮಕ್ಕಳ ಕಲ್ಯಾಣ ಸಮಿತಿಯಿಂದ ಮಕ್ಕಳನ್ನು ದತ್ತು ಮುಕ್ತ ಆದೇಶ ಘೋಷಿಸಲ್ಪಟ್ಟ **ನಂತರ 6 ರಿಂದ 8 ವರ್ಷದೊಳಗಿನ ದತ್ತು ಪಡೆಯುವ ಮಕ್ಕಳಿಗೆ 2 ವರ್ಷಗಳ ಅವಧಿಯೊಳಗೆ** ಒಂದು ಕುಟುಂಬವು ದತ್ತು ಪಡೆಯದೇ ಇದ್ದಲ್ಲಿ ಅಂತಹ ಮಕ್ಕಳು ಪೋಷಕತ್ವ ಯೋಜನೆ ಅಡಿಯಲ್ಲಿ ನೀಡಲು ಅರ್ಹತೆ ಹೊಂದಿರುತ್ತದೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಥವಾ ವಿಶೇಷ ದತ್ತು ಸಂಸ್ಥೆಯವರು ಶಿಫಾರಸ್ಸಿನ ಮೇರೆಗೆ ಮಕ್ಕಳ ಕಲ್ಯಾಣ ಸಮಿತಿಯು ಪೋಷಕತ್ವ ಯೋಜನೆಯಡಿ ನೀಡಬಹುದು.
* ದತ್ತು **ಮುಕ್ತ ಆದೇಶ ಪಡೆದ ಮಗು 8 ರಿಂದ 18 ವರ್ಷದ ವಯಸ್ಸಿನ ಮಗುವನ್ನು** ದತ್ತು ಪೋಷಕರು ಯಾರೂ ಆಯ್ಕೆ ಮಾಡದಿದ್ದ ಪಕ್ಷದಲ್ಲಿ ಮಕ್ಕಳ ಕಲ್ಯಾಣ ಸಮಿತಿಯು ವಿಶೇಷ ದತ್ತು ಸಂಸ್ಥೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಶಿಫಾರಸ್ಸಿನ ಮೇರೆಗೆ ಅಂತಹ ಮಕ್ಕಳನ್ನು ಪೋಷಕತ್ವ ಯೋಜನೆ ಅಡಿಯಲ್ಲಿ ನೀಡಬಹುದಾಗಿದೆ.
* **ಯಾವುದೇ ವಯಸ್ಸಿನ ವಿಶೇಷ ಅಗತ್ಯತೆಯುಳ್ಳ ಮಗು ಹಾಗು ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆದು ಒಂದು ವರ್ಷದ ಅವಧಿಯಲ್ಲಿ** ವಿದೇಶಿ ಮತ್ತು ಸ್ವದೇಶಿ ದತ್ತು ಪೋಷಕರು ದತ್ತು ಪಡೆಯದಿರುವ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯು, ವಿಶೇಷ ದತ್ತು ಸಂಸ್ಥೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಶಿಫಾರಸ್ಸಿನ ಮೇರೆಗೆ ಕುಟುಂಬ ಅಥವಾ ಗುಂಪು ಪೋಷಕತ್ವ ಯೋಜನೆ ಅಡಿಯಲ್ಲಿ ನೀಡಬಹುದಾಗಿದೆ.
  ಹೀಗೆ ನೀಡುವ ಮುನ್ನ ಅಂತಹ ಕುಟುಂಬಕ್ಕೆ ಸಂಬಂಧಿಸಿದ ಅಧ್ಯಯನ ವರದಿಯು ಈ ಮಕ್ಕಳಿಗೆ ಪೂರಕ ಬೆಂಬಲ ನೀಡುವ ಬಗ್ಗೆ ಹಾಗು ಗುಂಪು ಪೋಷಕತ್ವ ಯೋಜನೆಯು

ಇಂತಹ ಮಕ್ಕಳ ರಕ್ಷಣೆಗೆ ಅಗತ್ಯವಾದ ಸೌಲಭ್ಯ ಒದಗಿಸುವ ಕುರಿತು ಖಾತರಿ ಪಡಿಸಿಕೊಳ್ಳಬೇಕಿದೆ

**(ಬಿ) ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆಯದ ಮಕ್ಕಳು:**

ಪೋಷಕತ್ವ ಯೋಜನೆಯಡಿ ಕುಟುಂಬಕ್ಕೆ ನೀಡಲ್ಪಟ್ಟ ಮಕ್ಕಳು ಕನಿಷ್ಠ 5 ವರ್ಷಗಳಿದ್ದಲ್ಲಿ, ಅಂತಹ ಮಕ್ಕಳನ್ನು ದತ್ತು ಕೋರಿ ಪೋಷಕತ್ವ ಕುಟುಂಬಗಳು ಅರ್ಜಿ ಸಲ್ಲಿಸಬಹುದು. ಇಂತಹ ಪೋಷಕರು ದತ್ತು ಅಧಿಸೂಚನೆ ಅನ್ವಯ CARINGS Website ನಲ್ಲಿ ತೆರೆಯಲಾಗುವ ಪ್ರತ್ಯೇಕ ಪುಟದಲ್ಲಿ ನೋಂದಣಿ ಮಾಡಿಕೊಂಡು ದತ್ತು ಪಡೆಯಬಹುದಾಗಿದೆ

**ಸಿ) ಅಸಾಂಸ್ಥೀಕರಣಗೊಳಿಸಬೇಕಾದ ಮಕ್ಕಳು:**

- ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆಯದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ 6–18 ವರ್ಷದ ಒಳಗಿನ ಮಕ್ಕಳ Individual Care Plan ಆಧರಿಸಿ, ಗುಂಪು ಪೋಷಕತ್ವದಡಿಯಲ್ಲಿ ಮಕ್ಕಳನ್ನು ನೀಡಬಹುದಾಗಿದೆ.

- ಪೋಷಕರು ಮಾರಕವಾದ ಅನಾರೋಗ್ಯದಿಂದ ಬಳಲುತ್ತಿದ್ದು ಮಗುವನ್ನು ನೋಡಕೊಳ್ಳಲು ಸಾಧ್ಯವಾಗದೇ, ಮಗುವಿನ ಪುನರ್ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಗುವನ್ನು ನೋಡಿಕೊಳ್ಳುವಂತೆ ವಿನಂತಿಸಿಕೊಂಡಿದ್ದಲ್ಲಿ, ಅಂತಹ ಮಕ್ಕಳನ್ನು ಗುಂಪು ಪೋಷಕತ್ವದಡಿಯಲ್ಲಿ ನೀಡಬಹುದಾಗಿದೆ.

**6. ಪೋಷಕತ್ವ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪಾತ್ರ:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಜಿಲ್ಲೆಯಲ್ಲಿ ಘೋಷಕತ್ವ ಯೋಜನೆಯನ್ನು ಅನುಷ್ಠಾನಗೊಳಿಸುವ ನೋಡೆಲ್ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸಬೇಕಿದೆ. ಮಕ್ಕಳನ್ನು ಪೋಷಕತ್ವ ಯೋಜನೆಯಲ್ಲಿ ಇರಿಸುವ ಎಲ್ಲಾ ನಿರ್ಧಾರಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಶಿಫಾರಸ್ಸಿನ ಮೇರೆಗೆ ಮಕ್ಕಳ ಕಲ್ಯಾಣ ಸಮಿತಿಯ ತೆಗೆದುಕೊಳ್ಳಬೇಕಿರುತ್ತದೆ.

**(ಎ) ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳನ್ನು ಪೋಷಕತ್ವ ಯೋಜನೆಯಲ್ಲಿ ಇರಿಸಲು ಅನುಸರಿಸಬೇಕಾದ ನಿಯಮಗಳು:**

1. ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಪ್ರತಿಯೊಂದು ಮಗುವಿಗೂ ಬಾಲನ್ಯಾಯ ನಿಯಮಗಳು 2016 **ನಮೂನೆ** 7ರಲ್ಲಿ ತಿಳಿಸಿರುವಂತೆ Individual Care Plan ಸಿದ್ಧಪಡಿಸಬೇಕು. ನಿಯಮಿತವಾಗಿ ಮಕ್ಕಳ ಅಗತ್ಯತೆಗಳು ಹಾಗು ಮಕ್ಕಳ ಹಿತಾಸಕ್ತಿಗಳನ್ನು ಪರಿಶೀಲಿಸಿ, Individual Care Plan ರ ಅನ್ವಯ ಪೋಷಕತ್ವ ಯೋಜನೆಯಡಿ ಹೊಂದಾಣಿಕೆ ಮಾಡಬೇಕು.

2. ಪೋಷಕತ್ವ ಯೋಜನೆಯಡಿ ಗುರುತಿಸಿದ ಮಗುವಿಗೆ ಬಾಲನ್ಯಾಯ ನಿಯಮಗಳು 2016 **ನಮೂನೆ 31ರಲ್ಲಿ** ತಿಳಿಸಿರುವಂತೆ ವಿವರವಾದ Child Study Report ಸಿದ್ಧಪಡಿಸಬೇಕು.

3. ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಸಾಮಾಜಿಕ ಕಾರ್ಯಕರ್ತ ಅಥವಾ ಮಕ್ಕಳ ಕಲ್ಯಾಣಾಧಿಕಾರಿಯು ಮಗುವಿನ Individual Care Plan ಹಾಗು Child Study Report ಗಳನ್ನು ಆಧರಿಸಿ ಪೋಷಕತ್ವ ಯೋಜನೆಯಡಿ ಸೌಲಭ್ಯ ಪಡೆಯಬಹುದಾದ ಮಕ್ಕಳ ಪಟ್ಟಿಯನ್ನು ಶಿಫಾರಸ್ಸು ಮಾಡಬೇಕು.

4. ಈ ರೀತಿ ಗುರುತಿಸ್ಪಟ್ಟ ಮಕ್ಕಳು ಹಾಗು ದತ್ತು ಮುಕ್ತ ಆದೇಶ ಪಡೆದು ದತ್ತು ಹೋಗದೇ ಇರುವ ಮಕ್ಕಳ ಪಟ್ಟಿಯನ್ನು ಮಕ್ಕಳ ಪಾಲನಾ ಸಂಸ್ಥೆಯ ಮುಖ್ಯಸ್ಥರು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಿಕೊಡಬೇಕು.

**(ಬಿ) ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪೋಷಕತ್ವ ಕುಟುಂಬಗಳನ್ನು ಗುರುತಿಸುವ ಬಗ್ಗೆ:**

1. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸ್ಥಳೀಯ ಪತ್ರಿಕೆಗಳಲ್ಲಿ ನಿಯಮಿತವಾಗಿ ಪ್ರಕಟನೆ ನೀಡುವ ಮೂಲಕ ಸೂಕ್ತ ಮಕ್ಕಳನ್ನು ಪೋಷಕತ್ವ ಯೋಜನೆಯಡಿ ತೆಗೆದುಕೊಳ್ಳಬಯಸುವ ಕುಟುಂಬಗಳು ಹಾಗು ಮಕ್ಕಳ ಕುರಿತಾದ ಅವರ ಆಯ್ಕೆಯ ಮಾಹಿತಿಯನ್ನು ಅರ್ಜಿ ಆಹ್ವಾನಿಸುವ ಮೂಲಕ ಪೋಷಕತ್ವ ಕುಟುಂಬಗಳನ್ನು ಗುರುತಿಸಬೇಕು. ಈ ಪ್ರಕಟನೆಗೆ ಅನುಗುಣವಾಗಿ ಪೋಷಕತ್ವ ನೀಡಲು ಕುಟುಂಬಗಳು **ಅನುಬಂಧ**– ಎ ರಲ್ಲಿ ಅರ್ಜಿ ಸಲ್ಲಿಸಬೇಕು.

2. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅರ್ಜಿ ಸಲ್ಲಿಸಿದ ಪೋಷಕತ್ವ ನೀಡಲು ಬಯಸಿದ ಕುಟುಂಬಗಳ ಪಟ್ಟಿಯನ್ನು ಬಾಲನ್ಯಾಯ ಕಾಯ್ದೆ 44(2)ರ ಅನ್ವಯ ಅಂತಿಮಗೊಳಿಸಬೇಕು ಹಾಗು ಇಂತಹ ಕುಟುಂಬಗಳೊಂದಿಗೆ ಸಂದರ್ಶನ ಮಾಡುವ ಮುಖಾಂತರ ಪೋಷಕತ್ವ ನೀಡುವ ಕುಟುಂಬಗಳ ಸೂಕ್ತತೆಯನ್ನು ನಿರ್ಧರಿಸಬೇಕು. ಈ ರೀತಿಯ ಪೋಷಕತ್ವ ನೀಡಬಯಸುವ ಕುಟುಂಬಗಳ ಅರ್ಹತೆಯನ್ನು **ಅನುಬಂಧ – ಬಿ** ಯಲ್ಲಿ ನಿರ್ಧರಿಸಬೇಕು.

3. ಪ್ರತಿ ಪೋಷಕತ್ವ ಕುಟುಂಬ ನೀಡಿರುವ ಸಮುದಾಯದಲ್ಲಿ ಇಬ್ಬರು ಉತ್ತಮ ಸ್ಥಿತಿಯ ವ್ಯಕ್ತಿಗಳ ಉಲ್ಲೇಖ (two references from individuals of good standing from the community) ಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪರಿಶೀಲಿಸಬೇಕು.

4. ಮೇಲ್ಕಡಂತೆ, ಪೋಷಕತ್ವ ನೀಡಲು ಬಯಸಿದ ಕುಟುಂಬಗಳ ಸೂಕ್ತತೆಯನ್ನು ನಿರ್ಧರಿಸಿದ ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅಂತಹ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಖಾತರಿಪಡಿಸಿಕೊಳ್ಳಬೇಕು. ಅಂದರೆ ಪೋಷಕತ್ವ ಯೋಜನೆಯಡಿ ಲಭ್ಯವಾಗುವ ಮಗುವಿನ ನಿರ್ವಹಣಾ ವೆಚ್ಚವನ್ನು ಅವಲಂಬಿಸದೇ, ಮಗುವಿನ ಅವಶ್ಯಕತೆಗಳನ್ನು ಪೂರೈಸಲು ಶಕ್ತರಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಮಗುವನ್ನು ನೋಡಿಕೊಳ್ಳುವ ಎಲ್ಲಾ ಅರ್ಹತೆಗಳಿದ್ದು, ಆರ್ಥಿಕ ಸಹಾಯ ಅಗತ್ಯವಿದ್ದರೆ, ಅಂತಹ ಪ್ರಕರಣಗಳನ್ನು ಇದಕ್ಕೆಂದೇ ರಚಿತವಾಗಿರುವ ಸಮಿತಿಯ ಮುಂದೆ ಮಕ್ಕಳ ಕಲ್ಯಾಣ ಸಮಿತಿಯ ಅಂತಿಮ ಆದೇಶದ ನಂತರ

ಮಂಡಿಸಬೇಕು. ಈ ರೀತಿಯ ಆರ್ಥಿಕ ಸಹಾಯವನ್ನು ಅವಶ್ಯವಿದ್ದಲ್ಲಿ ಮಕ್ಕಳು ಉನ್ನತ ವಿದ್ಯಾಭ್ಯಾಸವನ್ನು ಮುಂದುರಿಸುವಾಗಲೂ ಸಹ ನೀಡಬಹುದಾಗಿದೆ.

5. ಪ್ರತಿ ವರ್ಷ ಈ ರೀತಿ ನೆರವು ನೀಡಲು ಸಿದ್ಧರಿರುವ ಪೋಷಕತ್ವ ನೀಡಲು ಬಯಸಿದ ಕುಟುಂಬಗಳ ಪಟ್ಟಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ನಿರ್ವಹಿಸಬೇಕು. ಹಾಗು ಮಕ್ಕಳನ್ನು ಪೋಷಕತ್ವಕ್ಕೆ ನೀಡಲು ಅನುವಾಗುವಂತೆ ಮಕ್ಕಳ ಕಲ್ಯಾಣ ಸಮಿತಿಗೆ ಇಂತಹ ಪಟ್ಟಿಯನ್ನು ಕಳುಹಿಸಿಕೊಡಬೇಕು.

6. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪೋಷಕತ್ವ ಯೋಜನೆಯಡಿ ಇರಿಸಲು ಮಕ್ಕಳನ್ನು ಸಜ್ಜುಗೊಳಿಸುವುದು, ಪೋಷಕತ್ವ ನೀಡಲು ಗುರುತಿಸಿದ ಪೋಷಕರೊಡನೆ ಮ್ಯಾಚಿಂಗ್ ಮಾಡಲು ಕ್ರಮ ವಹಿಸಿ ವರದಿಯನ್ನು ಸಿದ್ಧಪಡಿಸಿ ಪತ್ರದೊಂದಿಗೆ ಮುಂದಿನ ಕ್ರಮಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸಬೇಕು

7. ಪೋಷಕತ್ವ ನೀಡುವ ಪೋಷಕರ ಪಟ್ಟಿ ಸ್ವೀಕರಿಸಿದ ನಂತರ ಮಕ್ಕಳ ಕಲ್ಯಾಣ ಸಮಿತಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಪೋಷಕರ ಗೃಹ ಅಧ್ಯಯನ ನಡೆಸಿ, ವರದಿಗಳನ್ನು ಬಾಲನ್ಯಾಯ ನಿಯಮಗಳು 2016 ನಮೂನೆ 30ರಲ್ಲಿ ಸಲ್ಲಿಸುವಂತೆ ತಿಳಿಸುವುದು

8. ಪೋಷಕತ್ವ ನೀಡಲು ಬಯಸಿದ ಪೋಷಕರ ಗೃಹ ಅಧ್ಯಯನ ವರದಿ (Home study report) ಹಾಗು ಮಗುವಿನ ಅಧ್ಯಯನ ವರದಿ (Child study report) ಹಾಗು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಲ್ಲಿಸಿದ matching report ಆಧರಿಸಿ ಮಕ್ಕಳ ಕಲ್ಯಾಣ ಸಮಿತಿಯು ಮಗುವನ್ನು ಪೋಷಕತ್ವ ನೀಡುವ ಆದೇಶವನ್ನು ಹೊರಡಿಸಲು ಕ್ರಮ ವಹಿಸಬೇಕು.

**ಪೋಷಕತ್ವದಡಿ ಮಗುವಿನ ಹಕ್ಕುಗಳು:**

- ಮಕ್ಕಳ ಕಲ್ಯಾಣ ಸಮಿತಿಯು ಜಿಲ್ಲಾ ಮತ್ತು ರಾಜ್ಯದ ಜೊತೆಗೂಡಿ ಮಗುವನ್ನು ಪೋಷಕತ್ವದಡಿ ಇಡುವುದು ಮಗುವಿನ ಹಿತದೃಷ್ಟಿಯಿಂದ ಉತ್ತಮವೆಂದು ಖಚಿತಪಡಿಸಿಕೊಳ್ಳಬೇಕು. ಅಲ್ಲದೇ ಪೋಷಕತ್ವದಡಿ ಇಡುವ ಮುನ್ನ ಸಾಧ್ಯವಾದಷ್ಟು ಮಗುವಿನ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಲ್ಲದೇ, ಈಗಾಗಲೇ ಸಿದ್ಧಪಡಿಸಿದ individual care plan ಅನ್ವಯ ನಿರ್ಧಾರ ತೆಗೆದುಕೊಳ್ಳಬೇಕು.
- ಜೈವಿಕ ಪೋಷಕರ ಸ್ಥಿತಿಗತಿಯ ಕುರಿತು ಮಾಹಿತಿಯು ಮಗುವಿಗೆ ಲಭ್ಯವಾಗುವಂತಿರಬೇಕು
- ಮಗುವಿನ ಅಭಿವೃದ್ಧಿಗೆ ಪೂರಕವಾದ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮದ ಬಗ್ಗೆ ಮಕ್ಕಳಿಗೆ ಮಾಹಿತಿಯನ್ನು ನೀಡಬೇಕು

**ಪೋಷಕತ್ವ ಯೋಜನೆಯಡಿ ಪೋಷಕರು ಹೊಂದಿರುವ ಹಕ್ಕುಗಳು:**

- ಕೇಳುವ ಮತ್ತು ಗೌರವ ಪಡೆಯಬೇಕಾದ ಹಕ್ಕು
- ಸಾಮಾಜಿಕ ಮೂಲ ಆಧಾರದ ಮೇಲೆ ತಾರತಮ್ಯವಿಲ್ಲದ ಹಕ್ಕು.
- ಬಾಲ ನ್ಯಾಯ ನಿಯಮ 44(5)ರಲ್ಲಿ ಸೂಚಿಸಲಾದ ವಿಧಾನವನ್ನು ಅನುಸರಿಸಿ ಅದೇ ಮಗುವನ್ನು ದತ್ತು ತೆಗೆದುಕೊಳ್ಳುವ ಹಕ್ಕು.

**ಮಗುವನ್ನು ನೋಡಿಕೊಳ್ಳುವಲ್ಲಿ ಪೋಷಕತ್ವ ಕುಟುಂಬದ ಜವಾಬ್ದಾರಿ:**

- ಮಗುವಿಗೆ ಸಾಕಷ್ಟು ಆಹಾರ, ಬಟ್ಟೆ, ವಸತಿ ಮತ್ತು ಶಿಕ್ಷಣವನ್ನು ನೀಡಬೇಕು.
- ಮಗುವಿಗೆ ಸಮಗ್ರವಾದ ದೈಹಿಕ, ಭಾವನಾತ್ಮಕ ಹಾಗು ಮಾನಸಿಕ ಆರೋಗ್ಯಕ್ಕಾಗಿ ರಕ್ಷಣೆ ಸಹಕಾರ ಹಾಗು ಚಿಕಿತ್ಸೆಯನ್ನು ಒದಗಿಸುವುದು.
- ವಯಸ್ಸಿನ ಅನುಗುಣವಾಗಿ ವೃತ್ತಿಪರ ತರಬೇತಿ ನೀಡುವುದು ಹಾಗೂ ಮಗುವಿನ ಬೆಳವಣಿಗೆಯ ಹಿತಾಸಕ್ತಿಗನುಗುಣವಾಗಿ ಅಗತ್ಯತೆಗಳನ್ನು ಒದಗಿಸುವುದು.
- ಉನ್ನತ ಶಿಕ್ಷಣ ಪಡೆಯಲು ಅಗತ್ಯತೆಗಳನ್ನು ಒದಗಿಸುವುದು
- ದೌರ್ಜನ್ಯ, ಅಪಮಾನ, ಹಿಂಸೆ, ನಿರ್ಲಕ್ಷತೆ, ನಿಂದನೆ, ಇತ್ಯಾದಿಗಳಿಂದ ರಕ್ಷಣೆ ನೀಡುವುದಲ್ಲದೇ, ಮಗುವಿನ ಕುರಿತ ಸಂಪೂರ್ಣ ಮಾಹಿತಿ ಹೊಂದಿರಬೇಕು.
- ಮಗು, ಮಗುವಿನ ಜೈವಿಕ ಪೋಷಕರು ಅಥವಾ ರಕ್ಷಕರ ಗೌಪ್ಯತೆಯನ್ನು ಗೌರವಿಸುವುದರೊಂದಿಗೆ, ಅವರು ನೀಡಿರುವ ಮಾಹಿತಿಯನ್ನು ಗೌಪ್ಯವಾಗಿರಿಸಬೇಕು. ಅವರ ಅನುಮತಿ ಇಲ್ಲದೇ ಬೇರೆಯವರಿಗೆ ಮಾಹಿತಿಯನ್ನು ಬಹಿರಂಗ ಪಡಿಸಬಾರದು
- ತುರ್ತು ಸಂದರ್ಭಗಳಲ್ಲಿ ಮಗುವಿಗೆ ಚಿಕಿತ್ಸೆ ಒದಗಿಸಿ ಜೈವಿಕ ಪೋಷಕರಿಗೆ ಹಾಗು ಮಕ್ಕಳ ಕಲ್ಯಾಣ ಸಮಿತಿಯವರಿಗೆ ಮಾಹಿತಿ ಒದಗಿಸುವುದರಿಂದ ಅಗತ್ಯವಿದ್ದಾಗ ಸೂಕ್ತ ಆದೇಶ ಹೊರಡಿಸಬಹುದಾಗಿದೆ.
- ಕುಟುಂಬದೊಂದಿಗೆ ಹಾಗು ಶಾಲೆಯೊಂದಿಗೆ ಮಗುವಿನ ಹೊಂದಾಣಿಕೆ, ಪ್ರಗತಿ ಇತ್ಯಾದಿಯ ಕುರಿತು ನಿಯಮಿತವಾಗಿ ಮಕ್ಕಳ ಕಲ್ಯಾಣ ಸಮಿತಿ, ಮಗುವಿನ ಜೈವಿಕ ಪೋಷಕರಿಗೆ ನೀಡುವುದರೊಂದಿಗೆ ಸಮಿತಿ ಸೂಚಿಸಿದಲ್ಲಿ ಮಗುವನ್ನು ಸಮಿತಿಯ ಮುಂದೆ ಹಾಜರುಪಡಿಸಬೇಕು.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಯ ಗೃಹ ಭೇಟಿಯ ಸಂದರ್ಭದಲ್ಲಿ ಮಗು ಹಾಗು ಘಟಕದ ಸಿಬ್ಬಂದಿಯರ ನಡುವೆ ಉತ್ತಮ ಬಾಂಧವ್ಯ ಕಲ್ಪಿಸಲು ನೆರವಾಗಬೇಕು.
- ಮಗುವಿನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಕಲ್ಯಾಣ ಸಮಿತಿಯು ಸಮಾಲೋಚನೆ ನಡೆಸುವ ಮೂಲಕ ಮಗು ಹಾಗು ಜೈವಿಕ ಪೋಷಕರ ನಡುವೆ ಸಂಪರ್ಕ ಕಲ್ಪಿಸಲು ನೆರವಾಗಬೇಕು.

## (ಸಿ) ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅರ್ಹ ವ್ಯವಸ್ಥೆಯನ್ನು ಗುರುತಿಸುವ ಕುರಿತು:

1. ಈಗಾಗಲೇ ನೀಡಿರುವ ಮಾರ್ಗಸೂಚಿಯಂತೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಗುಂಪು ಪೋಷಕತ್ವ ಯೋಜನೆಯಡಿ ಮಕ್ಕಳನ್ನು ನೋಡಿಕೊಳ್ಳಲು ಆಸಕ್ತಿ ಇರುವ ವ್ಯವಸ್ಥೆಯನ್ನು ಗುರುತಿಸಲು ಅನುವಾಗುವಂತೆ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ನೀಡಿ ಅರ್ಜಿಯನ್ನು ಆಹ್ವಾನಿಸಬೇಕು.

2. ಇದರೊಂದಿಗೆ ಇಂತಹ ಸಂಸ್ಥೆಗಳ ಪದಾಧಿಕಾರಿಗಳನ್ನು ಸಂದರ್ಶನ ನಡೆಸುವ ಮೂಲಕ ಸಂಸ್ಥೆಯಲ್ಲಿರುವ ಸೌಲಭ್ಯಗಳು ಮತ್ತು ಮಕ್ಕಳ "ಆರೈಕೆ ಮಾಡುವವರ" (care givers) ಅರ್ಹತೆಯನ್ನು ಖಚಿತಪಡಿಸಿಕೊಳ್ಳಬೇಕು.

3. ಗುಂಪು ಪೋಷಕತ್ವ ನಡೆಸುವ ಪ್ರತಿ ಅರ್ಹ ವ್ಯವಸ್ಥೆಯು ನೀಡಿರುವ ಸಮುದಾಯದಲ್ಲಿ ಇಬ್ಬರು ಉತ್ತಮ ಸ್ಥಿತಿಯ ವ್ಯಕ್ತಿಗಳ ಉಲ್ಲೇಖ (two references from individuals of good standing from the community) ಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪರಿಶೀಲಿಸಬೇಕು.

4. ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಂಸ್ಥೆಯು ಬಾಲನ್ಯಾಯ ಕಾಯ್ದೆಯಡಿ ನೋಂದಣಿ ಆಗಿರುವುದನ್ನು ಸಂಸ್ಥೆಯ ಮಾನ್ಯತೆ, ಮಕ್ಕಳ ರಕ್ಷಣಾ ಪಾಲಿಸಿ, ಆರೈಕೆ ಮಾಡುವರ ವೈದ್ಯಕೀಯ ವರದಿ, ಪೋಲಿಸ್ ಪರಿಶೀಲನೆ ಇತ್ಯಾದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಖಾತರಿ ಪಡಿಸಿಕೊಳ್ಳಬೇಕು.

5. ಇದರೊಂದಿಗೆ ಸಂಸ್ಥೆಯು ನೀತಿ ಆಯೋಗದಡಿ ನೋಂದಣಿ ಹೊಂದಿರುವುದನ್ನು ಸಹ ಖಚಿತ ಪಡಿಸಿಕೊಳ್ಳಬೇಕು.

6. ಸಂಸ್ಥೆಯು ಹೊರ ದೇಶಗಳಿಂದ ದೇಣಿಗೆ ಪಡೆಯುತ್ತಿದ್ದರೆ, FCRA ಅಡಿಯಲ್ಲಿ ನೋಂದಣಿ ಹೊಂದಿರುವುದನ್ನು ಸಹ ಖಚಿತ ಪಡಿಸಿಕೊಳ್ಳಬೇಕು.

7. ಅರ್ಹ ಸಂಸ್ಥೆಯ ವ್ಯವಸ್ಥೆಯನ್ನು ಪರಿಶೀಲಿಸಿದ ನಂತರ, ಮಗುವಿನ ಅಧ್ಯಯನ ವರದಿ (Child study report) ಹಾಗು ಗುಂಪು ಪೋಷಕತ್ವ ಯೋಜನೆಯಡಿ ಸೇವೆ ಸಲ್ಲಿಸುತ್ತಿರುವ ಆರೈಕೆ ಮಾಡುವವರೊಂದಿಗೆ ಹೊಂದಾಣಿಕೆ ಎಲ್ಲಾ ಅಂಶಗಳನ್ನು ಗಮನಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮಗುವನ್ನು ಗುರುತಿಸಿದ ಅರ್ಹ ವ್ಯವಸ್ಥೆಯಲ್ಲಿ ಗುಂಪು ಪೋಷಕತ್ವಯಡಿ ಇರಿಸಲು ಶಿಫಾರಸ್ಸು ಮಾಡಬೇಕು.

**ಅರ್ಹ ವ್ಯವಸ್ಥೆಯಲ್ಲಿನ ಆರೈಕೆ ಮಾಡುವವರು ಹೊಂದಿರುವ ಹಕ್ಕು:**

- ಕೇಳುವ ಮತ್ತು ಗೌರವ ಪಡೆಯಬೇಕಾದ ಹಕ್ಕು
- ಸಾಮಾಜಿಕ ಮೂಲ ಆಧಾರದ ಮೇಲೆ ತಾರತಮ್ಯವಿಲ್ಲದ ಹಕ್ಕು.
- ತರಬೇತಿ ಹಾಗೂ ಸಮಾಲೋಚನೆ ಒಳಗಾಗುವ ಹಕ್ಕು.
- ನೇಮಕಾತಿಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ರಾಜೀನಾಮೆ ನೀಡುವ ಮತ್ತು ಪಿ.ಎಫ್/ನಿವೃತ್ತಿ ಭತ್ಯೆಗಳನ್ನು ಪಡೆಯುವ ಹಕ್ಕು

**ಅರ್ಹ ವ್ಯವಸ್ಥೆಯಲ್ಲಿನ ಆರೈಕೆ ಮಾಡುವವರು ನಿರ್ವಹಿಸಬೇಕಾದ ಜವಾಬ್ದಾರಿಗಳು:**

ಆಹಾರ, ವಸತಿ, ಶಿಕ್ಷಣ ಸೌಲಭ್ಯ ಒದಗಿಸುವುದು ಹಾಗು ಉತ್ತಮ ಆರೈಕೆ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದರೊಂದಿಗೆ ಆರೈಕೆ ಮಾಡುವವರು ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸಬೇಕು.

- ಅರ್ಹ ವ್ಯವಸ್ಥೆ ಹಾಗು ಶಾಲೆಯೊಂದಿಗೆ ಮಗುವಿನ ಹೊಂದಾಣಿಕೆ, ಪ್ರಗತಿ ಇತ್ಯಾದಿಯ ಕುರಿತು ನಿಯಮಿತವಾಗಿ ಮಕ್ಕಳ ಕಲ್ಯಾಣ ಸಮಿತಿ, ಮಗುವಿನ ಜೈವಿಕ ಪೋಷಕರಿಗೆ ನೀಡುವುದರೊಂದಿಗೆ ಸಮಿತಿ ಸೂಚಿಸಿದಲ್ಲಿ ಮಗುವನ್ನು ಸಮಿತಿಯ ಮುಂದೆ ಹಾಜರುಪಡಿಸಬೇಕು.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಯು ಅರ್ಹ ವ್ಯವಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಗು ಹಾಗು ಘಟಕದ ಸಿಬ್ಬಂದಿಯರ ನಡುವೆ ಉತ್ತಮ ಬಾಂಧವ್ಯ ಕಲ್ಪಿಸಲು ನೆರವಾಗಬೇಕು.
- ಮಗುವಿನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಕಲ್ಯಾಣ ಸಮಿತಿಯು ಸಮಾಲೋಚನೆ ನಡೆಸುವ ಮೂಲಕ ಮಗು ಹಾಗು ಜೈವಿಕ ಪೋಷಕರ ನಡುವೆ ಸಂಪರ್ಕ ಕಲ್ಪಿಸಲು ನೆರವಾಗಬೇಕು.
- ಗಂಭೀರ ಖಾಯಿಲೆಗಳಿಗೆ ಚಿಕಿತ್ಸೆ ಕೊಡಿಸುವಾಗ, ಶಸ್ತ್ರ ಚಿಕಿತ್ಸೆ ಮಾಡಿಸುವಾಗ ಹಾಗು ಅರಿವಳಿಕೆ(Anesthesia) ಬಳಸುವ ಮುನ್ನ ಮುಂಚಿತವಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸಿ, ಸಮಿತಿಯ ಅನುಮೋದನೆ ಪಡೆದುಕೊಳ್ಳಬೇಕು.
- ರಜಾದಿನಗಳಲ್ಲಿ ಮಕ್ಕಳ ಪ್ರವಾಸವನ್ನು ಒಳಗೊಂಡಂತೆ ಮಗುವಿನ ಕುರಿತ ಸಂಪೂರ್ಣ ಮಾಹಿತಿಯನ್ನು ಯಾವಾಗಲೂ ಹೊಂದಿರಬೇಕು. ಮಗು ಓಡಿಹೋದ ಸಂದರ್ಭದಲ್ಲಿ ಕೂಡ ಮಾಹಿತಿಯನ್ನು ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸಬೇಕು.
- ಮಗುವಿಗೆ ಯಾವುದೇ ಅಪಘಾತವಾದಾಗ, ಗಾಯಾಗಳಾದಾಗ ನಿಂದನೆ, ಯಾವುದೇ ಅಪರಾಧ ಅಥವಾ ಸ್ವಯಂ ಹಾನಿಕಾರಕ ವರ್ತನೆಗಳ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ವರದಿ ಮಾಡಬೇಕು.
- ಮಗುವಿಗೆ ಕೌಶಲ್ಯ, ವೃತ್ತಿಪರ ತರಬೇತಿ ಹಾಗೂ ಉನ್ನತ ಶಿಕ್ಷಣವನ್ನು ನೀಡಲು ಬೆಂಬಲ ನೀಡಬೇಕು.

## (ಡಿ) ಸಮುದಾಯದಲ್ಲಿರುವ ಮಕ್ಕಳನ್ನು ಪೋಷಕತ್ವ ಯೋಜನೆಯಡಿ ಇರಿಸುವ ಕುರಿತು:

**ಪೋಷಕತ್ವ ಯೋಜನೆಯಡಿ ಇರಿಸಲು ಅರ್ಹ ಮಕ್ಕಳನ್ನು ಗುರುತಿಸುವ ಬಗ್ಗೆ**

ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪೋಷಕತ್ವ ಯೋಜನೆಯ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೋಷಕರ ಸಹಕಾರವಿಲ್ಲದ ಅರ್ಹ ಮಕ್ಕಳನ್ನು ಗುರುತಿಸಬೇಕು ಹಾಗು ಅಂತಹ ಮಕ್ಕಳ ಪಟ್ಟಿಯನ್ನು vulnerability mapping ಹಾಗು need assessment ಮಾಡುವ ಮೂಲಕ ಗುರುತಿಸಬೇಕು. ಇಂತಹ ಮಕ್ಕಳಿಗೆ ಬಾಲನ್ಯಾಯ ನಿಯಮಗಳು 2016 ನಮೂನೆ 31ರಲ್ಲಿ ಮಕ್ಕಳ ಅಧ್ಯಯನ ವರದಿ ಅನ್ವಯ ಆಧರಿಸಿ ಸಿದ್ಧಪಡಿಸಿ ಪೋಷಕತ್ವ ಯೋಜನೆಯಡಿ ಇರಿಸಬಹುದಾಗಿದಾಗಿದೆ.

ಪೋಷಕತ್ವ ಯೋಜನೆಯಡಿ ಮಕ್ಕಳನ್ನು ಇರಿಸಲು ಅರ್ಹ ಮಕ್ಕಳನ್ನು ಗುರುತಿಸಿ ಮಕ್ಕಳ ಅಧ್ಯಯನ ವರದಿ ಸಿದ್ಧಪಡಿಸುವುದರೊಂದಿಗೆ, ಈ ಮಕ್ಕಳಿಗೆ ಪೋಷಕತ್ವ ಕುಟುಂಬಗಳನ್ನು ಹಾಗು ಅರ್ಹ ವ್ಯವಸ್ಥೆಯನ್ನು ಗುರುತಿಸಿ ಶಿಫಾರಸ್ಸು ಮಾಡುವುದು, ಪೋಷಕರ ಗೃಹ ಅಧ್ಯಯನ ವರದಿಗಳನ್ನು ಸಿದ್ಧಪಡಿಸುವುದು, ಮಕ್ಕಳನ್ನು ಪೋಷಕತ್ವ ಯೋಜನೆಯಡಿ ಮ್ಯಾಚ್ ಮಾಡುವುದು, ಮಕ್ಕಳನ್ನು ಪೋಷಕತ್ವ ಯೋಜನೆಗೆ ಇರಿಸುವುದು, ಪೋಷಕರು/ ಅರ್ಹ ವ್ಯವಸ್ಥೆಯಲ್ಲಿರುವ ಆರೈಕೆ ನೀಡುವವರೊಂದಿಗೆ ಒಪ್ಪಂದ ಮಾಡಿಕೊಳ್ಳವುದು ಇತ್ಯಾದಿ ಕ್ರಮಗಳನ್ನು ಅನುಸರಿಸಬೇಕು.

## 7. ಮಕ್ಕಳನ್ನು ಪೋಷಕತ್ವದಡಿ ಇರಿಸಲು ಆದೇಶ ಹೊರಡಿಸುವ ಮುನ್ನ ಮಕ್ಕಳ ಕಲ್ಯಾಣ ಸಮಿತಿ ಅನುಸರಿಸಬೇಕಾದ ನಿಯಮಗಳು:

**(ಎ) ಪೋಷಕತ್ವ ಕುಟುಂಬದಲ್ಲಿ ಮಗುವನ್ನು ಇರಿಸುವಾಗ:**

- ಪೋಷಕತ್ವ ಕುಟುಂಬಕ್ಕೆ ಮಗುವನ್ನು ಮ್ಯಾಚ್ ಮಾಡಿದ ನಂತರ, ಮಕ್ಕಳ ಕಲ್ಯಾಣ ಸಮಿತಿಯು ಮಧ್ಯಂತರ ಆದೇಶ ಹೊರಡಿಸುವ ಮೂಲಕ ಮಗು ಹಾಗು ಪೋಷಕತ್ವ ನೀಡಲು ಮುಂದೆ ಬಂದ ಕುಟುಂಬವು ಸಾಮಾಜಿಕ ಕಾರ್ಯಕರ್ತರ ಮುಂದೆ ನಿರ್ಬಂಧಿತವಾಗಿ ಒಂದು ತಿಂಗಳ ಕಾಲ ಪರಸ್ಪರ ಮಾತುಕತೆ ನಡೆಸಲು, ಮಕ್ಕಳನ್ನು ಹೊರಗೆ ಕರೆದ್ಯೊಯಲು ಹಾಗು ಮಗುವು ಪೋಷಕತ್ವ ನೀಡಲು ಮುಂದೆ ಕುಟುಂಬದ ಇನ್ನಿತರ ಸದಸ್ಯರನ್ನು ಭೇಟಿ ಮಾಡಲು ಅವಕಾಶ ನೀಡಬೇಕು.
- ಈ ರೀತಿ ಮಧ್ಯಂತರ ಆದೇಶ ಹೊರಡಿಸಿದ ನಂತರ ಮಗು ಹಾಗು ಪೋಷಕತ್ವ ಕುಟುಂಬದ ಹೊಂದಾಣಿಕೆ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮೌಲ್ಯಮಾಪನ ಮಾಡಿ ವರದಿಯನ್ನು 15 ದಿನಗಳೊಳಗೆ ಮಕ್ಕಳ ಕಲ್ಯಾಣ ಸಮಿತಿಗೆ ನೀಡಬೇಕು. ಈ ವರದಿಯು ಸದರಿ ಕುಟುಂಬಕ್ಕೆ ಆರ್ಥಿಕ ಸಹಾಯದ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಒಳಗೊಂಡಿರಬೇಕು.
- ಒಂದು ವೇಳೆ ಆರ್ಥಿಕ ಸಹಾಯ ಅಗತ್ಯವಿದ್ದು ಯಾವುದೇ ಪರ್ಯಾಯ ವ್ಯವಸ್ಥೆ ಇಲ್ಲದಿದ್ದಲ್ಲಿ, ಅಂತಹ ಪ್ರಕರಣಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಆರ್ಥಿಕ ಸಹಾಯ ಒದಗಿಸಲು ಪ್ರಸ್ತಾವನೆಯನ್ನು 15 ದಿನಗಳೊಳಗೆ ಸಲ್ಲಿಸಬೇಕು ಹಾಗು ಮಕ್ಕಳ ಕಲ್ಯಾಣ ಸಮಿತಿಗೆ ಅಂತಿಮ ಆದೇಶ ಹೊರಡಿಸಲು ಕೋರಬೇಕು.

**(ಬಿ) ಅರ್ಹ ವ್ಯವಸ್ಥೆಯಲ್ಲಿ ಗುಂಪು ಪೋಷಕತ್ವದಡಿ ಮಗುವನ್ನು ಇರಿಸುವಾಗ:**

ಅರ್ಹ ವ್ಯವಸ್ಥೆಯಡಿ ಆರೈಕೆ ಮಾಡುವವರೊಂದಿಗೆ ಮಗುವನ್ನು ಮ್ಯಾಚ್ ಮಾಡಿದ ನಂತರ. ಮಕ್ಕಳ ಕಲ್ಯಾಣ ಸಮಿತಿಯು ಮಧ್ಯಂತರ ಆದೇಶ ಹೊರಡಿಸುವ ಮೂಲಕ ಸಾಮಾಜಿಕ ಕಾರ್ಯಕರ್ತರ ಮುಂದೆ ನಿರ್ಭಂದಿತವಾಗಿ ಒಂದು ತಿಂಗಳ ಕಾಲ ಪರಸ್ಪರ ಮಾತುಕತೆ ನಡೆಸಲು ಹಾಗು ಮಗುವನ್ನು ಅರ್ಹ ವ್ಯವಸ್ಥೆಗೆ ಕರೆದ್ಯೊದು ಇತರ ಮಕ್ಕಳನ್ನು ಭೇಟಿ ಮಾಡಿಸಲು ಅವಕಾಶ ನೀಡಬೇಕು.

## 8. ಮಕ್ಕಳ ಕಲ್ಯಾಣ ಸಮಿತಿ ಅಂತಿಮ ಆದೇಶ ಹೊರಡಿಸುವ ಮುನ್ನ ಗಮನಿಸಬೇಕಾದ ಅಂಶಗಳು:

- ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಲ್ಲಿಸುವ ಹೊಂದಾಣಿಕೆ ವರದಿಯನ್ನು ಪರಿಶೀಲಿಸಿದ ನಂತರ ಮಕ್ಕಳ ಕಲ್ಯಾಣ ಸಮಿತಿಯು ಅಂತಿಮ ಆದೇಶವನ್ನು ಬಾಲನ್ಯಾಯ ನಿಯಮಗಳು 2016 ನಮೂನೆ 32 ರಲ್ಲಿ ಹೊರಡಿಸಿ ಅದರ ಪ್ರತಿಯನ್ನು ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ನೀಡಬೇಕು.
- ಒಂದು ವೇಳೆ ಪೋಷಕತ್ವ ಕುಟುಂಬಕ್ಕಾಗಲೀ ಅಥವಾ ಅರ್ಹ ವ್ಯವಸ್ಥೆಗಾಗಲೀ ಆರ್ಥಿಕ ಸಹಾಯ ಅಗತ್ಯವಿಲ್ಲದಿದ್ದಲ್ಲಿ, ಮಧ್ಯಂತರ ಆದೇಶ ಹೊರಡಿಸಿದ 60 ದಿನಗಳೊಳಗೆ ಅಂತಿಮ ಆದೇಶ ಹೊರಡಿಸಬೇಕು.
- ಒಂದು ವೇಳೆ ಪೋಷಕತ್ವ ಕುಟುಂಬಕ್ಕಾಗಲೀ ಅಥವಾ ಅರ್ಹ ವ್ಯವಸ್ಥೆಗಾಗಲೀ ಆರ್ಥಿಕ ಸಹಾಯ ಅಗತ್ಯವಿದ್ದಲ್ಲಿ, ಮಧ್ಯಂತರ ಆದೇಶ ಹೊರಡಿಸಿದ 75 ದಿನಗಳೊಳಗೆ ಅಂತಿಮ ಆದೇಶ ಹೊರಡಿಸಬೇಕು.
- ಮಗುವನ್ನು ಇರಿಸಿದ ಅರ್ಹ ವ್ಯವಸ್ಥೆಯನ್ನು ನೀಡುವ ಸಂಸ್ಥೆಯಲ್ಲಿ ಮಗುವಿಗೆ ಮಾಸಿಕವಾಗಿ ನೀಡುವ ರೂ. 2000/-ಗಳನ್ನು ಹೊರತುಪಡಿಸಿ, ಉನ್ನತ ವ್ಯಾಸಂಗಕ್ಕಾಗಿ ಹೆಚ್ಚುವರಿ ಆರ್ಥಿಕ ಸಹಾಯ ಅಗತ್ಯವಿದ್ದಲ್ಲಿ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬಹುದಾಗಿದೆ.
- ಒಂದು ವೇಳೆ ಪೋಷಕತ್ವ ಕುಟುಂಬಕ್ಕಾಗಲೀ ಅಥವಾ ಅರ್ಹ ವ್ಯವಸ್ಥೆಗಾಗಲೀ ಆರ್ಥಿಕ ಸಹಾಯ ಅಗತ್ಯವಿಲ್ಲದಿದ್ದಲ್ಲಿ, ಮಧ್ಯಂತರ ಆದೇಶ ಹೊರಡಿಸಿದ 60 ದಿನಗಳೊಳಗೆ ಆದೇಶ ಹೊರಡಿಸಬೇಕು.

## 9. ಮಗುವಿನ ಜವಾಬ್ದಾರಿ ಹೊರುವ ಪೋಷಕತ್ವ ಕುಟುಂಬ ಹಾಗು ಅರ್ಹ ವ್ಯವಸ್ಥೆಯು ಮಾಡಿಕೊಳ್ಳಬೇಕಾದ ಒಪ್ಪಂದ:

ಮಗುವನ್ನು ಪೋಷಕತ್ವಕ್ಕೆ ತೆಗೆದುಕೊಂಡು ಪೋಷಕರು ಹಾಗು ಅರ್ಹ ವ್ಯವಸ್ಥೆಯು ಮಗುವನ್ನು ಬಾಲನ್ಯಾಯ ನಿಯಮಗಳು ನಮೂನೆ 33ರಲ್ಲಿ ಪೋಷಕತ್ವಕ್ಕೆ ತೆಗೆದುಕೊಳ್ಳುತ್ತಿರುವ ಕುರಿತು ಒಪ್ಪಂದಕ್ಕೆ ಸಹಿ ಹಾಕಬೇಕು.

## 10. ಪೋಷಕತ್ವ ಕುಟುಂಬ ಹಾಗು ಅರ್ಹ ವ್ಯವಸ್ಥೆಯ ಆರೈಕೆ ನೀಡುವವರು ಒದಗಿಸುತ್ತಿರುವ suo motu care:

ಒಂದು ವೇಳೆ ಮಕ್ಕಳಿಗೆ ಶೀಘ್ರದಲ್ಲಿ ಮಕ್ಕಳಿಗೆ ಆರೈಕೆ ಒದಗಿಸಬೇಕಿದ್ದ ಸಂದರ್ಭದಲ್ಲಿ ಪೋಷಕತ್ವ ನೀಡಬಯಸುವ ಪೋಷಕರು ಹಾಗು ಅರ್ಹ ವ್ಯವಸ್ಥೆಯಲ್ಲಿರುವ ಆರೈಕೆ ನೀಡುವವರು ಮಕ್ಕಳ ಕಲ್ಯಾಣ ಸಮಿತಿಗೆ ಅರ್ಜಿ ಸಲ್ಲಿಸಬೇಕು. ಮಕ್ಕಳ ಕಲ್ಯಾಣ ಸಮಿತಿಯವರು ಪರಿಶೀಲಿಸಿ ನಿಯಮಗಳನ್ನು ಅನುಸರಿಸಿ 60 ದಿನಗಳೊಳಗೆ ಮಕ್ಕಳನ್ನು ಪೋಷಕತ್ವಕ್ಕೆ ನೀಡಬೇಕು

## 11. ಪೋಷಕತ್ವ ಯೋಜನೆಯಡಿ ಮಕ್ಕಳನ್ನು ಇರಿಸಲು ನೀಡಬೇಕಾದ ಸಮಾಲೋಚನೆ:

**(ಅ)ಮಕ್ಕಳಿಗೆ ನೀಡಬೇಕಾದ ಸಮಾಲೋಚನೆ:**

ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳನ್ನು ಪೋಷಕತ್ವ ಯೋಜನೆಯಡಿ ಇರಿಸುವಾಗ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಅನುವಾಗುವಂತೆ ಸಜ್ಜುಗೊಳಿಸುವುದು ಅತ್ಯಂತ ಪ್ರಾಮುಖ್ಯವಾದ ವಿಷಯ. ಹೊಸ ಬದುಕಿಗೆ ಹೊಂದಿಕೊಳ್ಳುವುದು ಮಗುವಿಗೆ ಅತ್ಯಂತ ತ್ರಾಸದಾಯಕವಾಗಿದ್ದು, ಮಗುವಿಗೆ ಧೀರ್ಘ ಸಮಾಲೋಚನೆ ಅಗತ್ಯವಿರುತ್ತದೆ. ಮಕ್ಕಳನ್ನು ಅಂತಿಮವಾಗಿ ಪೋಷಕತ್ವ ಇರಿಸುವ ಮುನ್ನ ಮಧ್ಯಂತರ ಅವಧಿಯಲ್ಲಿ ಮಗುವನ್ನು ಪೋಷಕತ್ವ ವ್ಯವಸ್ಥೆಯಲ್ಲಿ ಇರಿಸುವ ಅವಧಿ ಅತ್ಯಂತ ಪ್ರಮುಖ ಘಟ್ಟವಾಗಿದ್ದು ತರಬೇತಿ ಹೊಂದಿದ ಪರಿಣಿತರಿಂದ ನಿರ್ವಹಿಸಬೇಕು. ಈ ರೀತಿ ಸಜ್ಜುಗೊಳಿಸುವ ವಿಧಾನ ಮಗುವಿನ ವಯಸ್ಸನ್ನು ಆಧರಿಸಿರುತ್ತದೆ. ಹಿರಿಯ ವಯಸ್ಸಿನ ಮಕ್ಕಳನ್ನು ಪೋಷಕತ್ವ ಯೋಜನೆಯಡಿ ಇರಿಸುವಾಗ ಅಥವಾ ಸಂಕಷ್ಟ ಪರಿಸ್ಥಿಯಲ್ಲಿರುವ ಜೈವಿಕ ಪೋಷಕರಿಂದ ಮಕ್ಕಳನ್ನು ಬೇರ್ಪಡಿಸುವಾಗ ಆದ್ಯ ಗಮನ ನೀಡಬೇಕಿರುತ್ತದೆ. ಇಂತಹ ಸಂದರ್ಭಗಳಲ್ಲಿ ಜೈವಿಕ ಪೋಷಕರೊಡನೆ ಸಂಪರ್ಕ ಇಟ್ಟುಕೊಳ್ಳಲು ಅವಕಾಶ ಕಲ್ಪಿಸಬೇಕಿರುತ್ತದೆ. ಈ ಅವಧಿಯಲ್ಲಿ ಸಾಕಷ್ಟು ಸಮಾಲೋಚನೆಗೆ ಹಾಗು ಪೋಷಕತ್ವ ಕುಟುಂಬದಲ್ಲಿ ಸಂಪೂರ್ಣವಾಗಿ ಹೊಂದಿಕೊಳ್ಳಲು ಹಾಗು ಜೈವಿಕ ಕುಟುಂಬದ ಮಕ್ಕಳೊಂದಿಗೆ ಸಂವಹನ ನಡೆಸಲು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

(ಬಿ) ಅರ್ಹ ವ್ಯವಸ್ಥೆಯಲ್ಲಿರುವ ಆರೈಕೆ ನೀಡುವವರಿಗೆ ಸಮಾಲೋಚನೆ ಪ್ರಕಿಯೆ:

ಅರ್ಹ ವ್ಯವಸ್ಥೆಯಲ್ಲಿರುವ ಆರೈಕೆ ನೀಡುವವರಿಗೆ ಸಹ ಮಗುವಿನ ಸಂಪೂರ್ಣ ಜವಾಬ್ದಾರಿ ಹೊರುವ ಕುರಿತು ಸಮಾಲೋಚನೆ ನೀಡುವುದು ಅತ್ಯಗತ್ಯ. ಆರೈಕೆ ನೀಡುವವರಿಗೆ ಸಹ ಸ್ವಂತ ಮಕ್ಕಳಿದ್ದು, ಈ ಮಕ್ಕಳು ಸಹ ಅರ್ಹ ವ್ಯವಸ್ಥೆಯಲ್ಲಿಯ ಸೌಲಭ್ಯ ಪಡೆಯುತ್ತಿರಬಹುದು. ಇಂತಹ ಸಂದರ್ಭಗಳಲ್ಲಿ ಈ ಮಕ್ಕಳನ್ನು ಸಹ ಒಳಗೊಂಡಂತೆ ಪರಸ್ಪರ ಹೊಂದಾಣಿಕೆಯಿಂದ ಇರುವ ಕುರಿತು ಸಮಾಲೋಚನೆ ನೀಡಬೇಕಿರುತ್ತದೆ.

(ಸಿ) ಜೈವಿಕ ಪೋಷಕರನ್ನು ಒಳಗೊಂಡಂತೆ ಮಕ್ಕಳಿಗೆ ಸಮಾಲೋಚನೆ ಪ್ರಕಿಯೆ:

ಪ್ರತಿಯೊಂದು ಮಗುವಿಗೂ ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವ ಹಕ್ಕನ್ನು ಹೊಂದಿದ್ದು, ಈ ಮಕ್ಕಳನ್ನು ಆದಷ್ಟು ಜೈವಿಕ ಪೋಷಕರ ಕುಟುಂಬಕ್ಕೆ ಹಿಂತಿರುಗಿಸುವ ಪ್ರಯತ್ನ ಮಾಡಬೇಕು. ಒಂದು ವೇಳೆ ಜೈವಿಕ ಪೋಷಕರು ಬದುಕಿದ್ದಲ್ಲಿ, ಆ ಪೋಷಕರಿಗೂ ಕೂಡು ಮಕ್ಕಳನ್ನು ತಮ್ಮಲ್ಲಿ ಇರಿಸಿಕೊಳ್ಳುವಂತೆ ಸಮಾಲೋಚನೆ ನೀಡಬೇಕಿರುತ್ತದೆ.

ಮೇಲೆ ತಿಳಿಸಿದಂತೆ ವಿವಿಧ ಹಂತಗಳಲ್ಲಿ ಸಮಾಲೋಚನೆ ಪ್ರಕ್ರಿಯೆ ನಡೆಸಲು ಅನುವಾಗುವಂತೆ ಮಾಹಿತಿಯು Annexure C1 – C4 ಲಭ್ಯವಿರುತ್ತದೆ.

**ಹಣಕಾಸಿನ ಬೆಂಬಲ:**

ಪೋಷಕತ್ವವಡಿಯಲ್ಲಿ ಮಗುವಿನ ಆರೈಕೆಯಲ್ಲಿ ಹಣಕಾಸಿನ ಬೆಂಬಲ ಕೇಳಿದಾಗ, ಅನುಮೋದನೆಯ ನಂತರ ಪೋಷಕರಿಗೆ ಪ್ರತಿ ಮಗುವಿಗೆ ತಿಂಗಳಿಗೆ ರೂ.2000/–ಗಳಿಗಿಂತ ಕಡಿಮೆ ಆರ್ಥಿಕ ನೆರವು ನೀಡಬಹುದು. ಹಣಕಾಸಿನ ಬೆಂಬಲವು Juvenile Justice Fund ನಿಂದ ಅಥವಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯ ಅಥವಾ ಕಾರ್ಯಕ್ರಮದಿಂದ ಒದಗಿಸುವುದು. ಇದೇ ಆರ್ಥಿಕ ಮೊತ್ತವನ್ನು ಗುಂಪು ಪೋಷಕತ್ವದಲ್ಲಿ ಇರಿಸಲಾದ ಮಕ್ಕಳಿಗೂ ಸಹ ಅನ್ವಯಿಸುತ್ತದೆ.

**ಪ್ರಾಯೋಜಕತ್ವ ಮತ್ತು ಪೋಷಕತ್ವದ ಅನುಮೋದನಾ ಸಮಿತಿ:**

ಪ್ರತಿ ಜಿಲ್ಲೆಯಲ್ಲಿ ಪ್ರಾಯೋಜಕತ್ವ ಮತ್ತು ಪೋಷಕತ್ವದ ಹಣವನ್ನು ಪರಿಶೀಲಿಸಲು ಮತ್ತು ಮಂಜೂರು ಮಾಡಲು ಪ್ರಾಯೋಜಕತ್ವ ಮತ್ತು ಪೋಷಕತ್ವದ ಅನುಮೋದನಾ ಸಮಿತಿಯನ್ನು ರಾಜ್ಯ ಸರ್ಕಾರವು ರಚಿಸಬೇಕು. ಪ್ರಾಯೋಜಕತ್ವ ಮತ್ತು ಪೋಷಕತ್ವದ ಅನುಮೋದನಾ ಸಮಿತಿಯು ಪ್ರತಿ ತಿಂಗಳು ಸಭೆ ನಡೆಸಿ ಪ್ರತಿ ಪ್ರಕರಣವನ್ನು ವಿಲೇವಾರಿ ಮಾಡಲು ಒಟ್ಟು ಸಮಯವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ 3 ತಿಂಗಳು ಮೀರಬಾರದು.

**ಸುರಕ್ಷತೆಯ – ಶಿಫಾರಸ್ಸುಗಳು:**

1. 2 ಮಕ್ಕಳಿಗಿಂತ ಹೆಚ್ಚಿನ ಮಕ್ಕಳನ್ನು ಪೋಷಕತ್ವದ ಕುಟುಂಬಕ್ಕೆ ನೀಡಲು ಬರುವುದಿಲ್ಲ.
2. ಪೋಷಕತ್ವದ ಕುಟುಂಬಕ್ಕೆ ಜೈವಿಕ ಮಕ್ಕಳು ಸೇರಿದಂತೆ 4 ಮಕ್ಕಳು ಮೀರಬಾರದು.

3. ಸಾಮಾನ್ಯ ಸಂದರ್ಭಗಳಲ್ಲಿ ಹೆಚ್ಚುವರಿ ಸಂಖ್ಯೆಯನ್ನು ಹೊರತುಪಡಿಸಿ, ಒಂದು ಘಟಕದಲ್ಲಿ ಒಂದು ಗುಂಪು ಪೋಷಕತ್ವ ನೀಡುವುದರೊಂದಿಗೆ ಗುಂಪು ಪೋಷಕತ್ವದಲ್ಲಿ ಜೈವಿಕ ಮಕ್ಕಳು ಸೇರಿದಂತೆ 8 ಮಕ್ಕಳು ಮೀರಬಾರದು.
4. ಒಡಹುಟ್ಟಿದವರ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಒಂದೇ ಕುಟುಂಬದಲ್ಲಿ ಅಥವಾ ಅರ್ಹ ವ್ಯವಸ್ಥೆಯಲ್ಲಿ ಇರಿಸಲು ವಿನಾಯಿತಿ ನೀಡಲಾಗಿದೆ.
5. ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಪೋಷಕತ್ವ ನೀಡಲು ಜೈವಿಕ ಪೋಷಕರ ಒಪ್ಪಿಗೆಯನ್ನು ಪಡೆಯಬೇಕು.
6. ಒಂದು ವೇಳೆ ಪೋಷಕತ್ವ ಕುಟುಂಬದಲ್ಲಿ ವಿಶೇಷ ಅಗತ್ಯತೆಯುಳ್ಳ ಮಗುವಿದ್ದಲ್ಲಿ ಆ ಕುಟುಂಬಕ್ಕೆ ಮತ್ತೊಂದು ವಿಶೇಷ ಅಗತ್ಯತೆಯುಳ್ಳ ಮಗುವನ್ನು ನೀಡಬಾರದು. ಇದರ ಬದಲಿಗೆ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ನೋಡಿಕೊಳ್ಳಲು ಸೌಕರ್ಯಗಳನ್ನು ಹೊಂದಿರುವ ಅರ್ಹ ವ್ಯವಸ್ಥೆಯೊಳಗೆ ಇರಿಸಬೇಕು.
7. ಸಾಧ್ಯವಾದಷ್ಟು ಮಕ್ಕಳನ್ನು ಪೋಷಕತ್ವಕ್ಕೆ ನೀಡುವಾಗ ಅದೇ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಕುಟುಂಬದೊಳಗೆ ಇರಿಸುವುದು ಸೂಕ್ತ.

*****************